<u>ಕರ್ನಾಟಕ ಸರ್ಕಾರ</u>

<u>ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.</u>

<u>ಸಂ.ಕಂ/ಹಬ/ವಿವಾದ/17/2016-17</u> <u>ದಿ:18-10-2016</u>

| ವಾದಿಗಳು (ತಕರಾರುದಾರರು) | ಪ್ರತಿವಾದಿಗಳು(ಅರ್ಜಿದಾರರು) |
|---|---|
| ಬಾನೂಬಿ ಗಂಡ ಲೇಟ್ ಪತ್ರಿ ಹುಸೇನ್‌ಸಾಬ್ 3 ನೇ ವಾರ್ಡ್, ಹಳೇ ಪೋಲೀಸ್ ಠಾಣೆ ಹಿಂದುಗಡೆ **ತೆಕ್ಕಲಕೋಟೆ.** | 1.ಕಾಸಿಂಬೀ ತಂದೆ ಲೇಟ್ ಪತ್ರಿ ಕಲೀಲ್‌ಸಾಬ್ **ಉರ್ದು ಟಿಸಿಹೆಚ್ ಟ್ರೇನಿಂಗ್ ಶಾಲೆ ಹತ್ತಿರ, ಕೌಲ್ ಬಜಾರ್. ಬಳ್ಳಾರಿ.** 2.ಹುಸೇನ್‌ಬೀ ಗಂಡ ಲೇಟ್ ಪತ್ರಿ ಕಲೀಲ್‌ಸಾಬ್. 3.ಶಬಾನಾ ಬೇಗಂ, 4.ಟಿ.ವಾಹೀದಾ, 5.ಶಾಹೀನಾಬೇಗಂ 6.ಇರ್ಫಾನ್‌ಅಲಿ, 7.ಕಾಸೀಂ ಅಲಿ, 8.ಯಾಕೂಬ್‌ಅಲಿ, 9.ಎಂ.ರಫೀಕ್, 10.ಮೌಲಾಲಿ, 11. ಅಕ್ಬರ್‌ಅಲಿ, 12.ಸಲ್ಮಾ, ತಂದೆ ಲೇಟ್ ಪತ್ರಿ ಕಲೀಲ್‌ಸಾಬ್. **ಹಾವಿನಹಾಳು ಗ್ರಾಮ.** 13. ಮೌಲಾಬೀ ತಂದೆ ಲೇಟ್ ಸತ್ತಾರ್‌ಸಾಬ್. **ಸಾಸಲಮರಿ ಗ್ರಾಮ, ಸಿಂಧನೂರು ತಾಲೂಕು.** |

**ದಾವಾ ಜಮೀನಿನ ವಿವರ**

| **ತಾಲೂಕು** | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | 64-ಹಳೇಕೋಟೆ | 564/ಎ/1 ಪೈಕಿ | 2-00 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು 64-ಹಳೇಕೋಟೆ ಗ್ರಾಮದ ಸ,ನಂ:564/ಎ/1 ವಿ:3-33 ಎಕ್ರೆ ಜಮೀನು ಹಾಲಿ ಪಟ್ಟಾದಾರರಾದ **ಬಾನೂಬೀ ಗಂಡ ಲೇಟ್ ಪತ್ರೆ ಹುಸೇನ್‌ಸಾಬ್** ಹೆಸರಿಗೆ ಪಟ್ಟಾ ಇದ್ದು, ಮಾನ್ಯ ಎರಡನೇ ಹೆಚ್ಚುವರಿ (ಹಿ,ಶ್ರೇ) ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಪ್ರಕರಣ ಅಸಲು ದಾವಾ ಸಂಖ್ಯೆ:188/2012 ರ ದಿನಾಂಕ:02-02-2015 ರ ತೀರ್ಪಿನಂತೆ ಹಕ್ಕು ಹೊಂದಿದ ಪ್ರತಿವಾದಿಗಳು ದಿ:01-06-2016 ರಂದು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿದ ಪ್ರಯುಕ್ತ ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಸಂ:ಕಂ:ಪಹಣಿ:103/2016-17 ದಿ:23-07-2016 ರ ಪ್ರಕಾರ ಗಣಕೀಕರಣ ಶಾಖೆಗೆ ನೀಡಿದ ಟಿಪ್ಪಣಿಯಂತೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. 64-ಹಳೇಕೋಟೆ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ, ಬಾನೂಬಿ ಗಂಡ ಲೇಟ್ ಪತ್ರಿ ಹುಸೇನ್‌ಸಾಬ್ ಇವರು **"**ಸದರಿ ಪ್ರಕರಣದಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ನ್ಯಾಯಾಲಯದಿಂದ ಆದೇಶ ಪಡೆದು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು**"** ದಿನಾಂಕ:01-09-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:16/2016-17 ದಿ:14-09-2016 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:29-09-216, 06-10-2016, 13-10-2016 ರಂದು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ, ವಾದಿಯ ವಾದ ಆಲಿಸಲಾಯಿತು. ವಾದಿಯ ಹೇಳಿಕೆ ಪ್ರಕಾರ "ಸದ್ರಿ ಜಮೀನು ತನ್ನ ಗಂಡನ ಹೆಸರಿನಿಂದ ತಮ್ಮ ಹೆಸರಿಗೆ ಹೊಂದಿದ್ದು, ಪ್ರಸ್ತುತ ತನ್ನ ಸ್ವಾಧೀನಾನುಭವದಲ್ಲಿದ್ದು, ಹುಸೇನ್‌ಬೀ ಗಂಡ ಲೇಟ್ ಪತ್ರಿ ಕಲೀಲ್‌ಸಾಬ್ ಇವರು ಹಾಗೂ ಕುಟುಂಬದವರು ಸುಳ್ಳು ದಾಖಲೆ ಸೃಷ್ಠಿಸಿ, ನ್ಯಾಯಾಲಯದಿಂದ ಏಕ ಪಕ್ಷೀಯವಾಗಿ ತಮ್ಮ ಹೆಸರಿಗೆ ಡಿಕ್ರಿ ಹೊಂದಿ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಸದ್ರಿಯವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ.

ಪ್ರತಿವಾದಿಗಳು ಮಾನ್ಯ ಎರಡನೇ ಹೆಚ್ಚುವರಿ (ಹಿ,ಶ್ರೇ) ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಪ್ರಕರಣ ಅಸಲು ದಾವಾ ಸಂಖ್ಯೆ:188/2012 ರ ದಿನಾಂಕ:02-02-2015 ರ ತೀರ್ಪಿನಂತೆ ತಾವುಗಳು ಹಕ್ಕು ಹೊಂದಿದ್ದು, ಅದರಂತೆ 64-ಹಳೇಕೋಟೆ ಗ್ರಾಮ ಸ,ನಂ:564/ಎ/1 ವಿ:3-33 ರಲ್ಲಿ ಕ್ರಮ ಸಂಖ್ಯೆ:1 ರಿಂದ 12 ರ ವರೆಗಿನವರಿಗೆ ವಿ:1-00 ಎಕ್ರೆ ಜಂಟಿಯಾಗಿ ಹಾಗೂ ಕ್ರಮ ಸಂಖ್ಯೆ: 13 ರವರಿಗೆ ವಿ:1-00 ಎಕ್ರೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮುಂದುವರೆದು ಸದ್ರಿ ಪ್ರಕರಣದಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶ ವಿರುದ್ಧ ಮೇಲಿನ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿ, ತಡೆಯಾಜ್ಞೆ ಆದೇಶ ಪಡೆದ ಬಗ್ಗೆ ವಾದಿಗಳು ಪೂರಕ ದಾಖಲೆ ಹಾಜರುಪಡಿಸಿರುವುದಿಲ್ಲ, ಅಲ್ಲದೇ ಸದ್ರಿ ಪ್ರಕರಣವು ಸಿವಿಲ್ ನ್ಯಾಯಾಲಯದ ಡಿಕ್ರಿ ಪ್ರಕಾರ ಹಕ್ಕು ಬದಲಾವಣೆಗೆ ಸಂಭಂದಿಸಿದ್ದು, ಈ ಬಗ್ಗೆ ವಾದಿಗಳು ಉನ್ನತ ನ್ಯಾಯಾಲಯದ ಮೊರೆಹೋಗಿ ಪರಿಹಾರ ಕಂಡುಕೊಳ್ಳ ಬೇಕಾಗಿರುತ್ತದೆ.

ಆದ್ದರಿಂದ, ಸಿರುಗುಪ್ಪ ತಾಲೂಕು 64-ಹಳೇಕೋಟೆ ಗ್ರಾಮ ಸ,ನಂ:564/ಎ/1 ವಿ:3-33 ರಲ್ಲಿ ಕ್ರಮ ಸಂಖ್ಯೆ:1 ರಿಂದ 12 ರ ವರೆಗಿನವರಿಗೆ ವಿ:1-00 ಎಕ್ರೆ ಜಂಟಿಯಾಗಿ ಹಾಗೂ ಕ್ರಮ ಸಂಖ್ಯೆ: 13 ರವರಿಗೆ ವಿ:1-00 ಎಕ್ರೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/17/2016-17** **ದಿ:18-10-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ತಾಲೂಕು 64-ಹಳೇಕೋಟೆ ಗ್ರಾಮದ ಸ,ನಂ:564/ಎ/1 ವಿ:3-33 ಎಕ್ರೆ ಜಮೀನು ಹಾಲಿ ಪಟ್ಟಾದಾರರಾದ **ಬಾನೂಬೀ ಗಂಡ ಲೇಟ್ ಪತ್ರೆ ಹುಸೇನ್‌ಸಾಬ್** ಹೆಸರಿಗೆ ಪಟ್ಟಾ ಇದ್ದು, ಮಾನ್ಯ ಎರಡನೇ ಹೆಚ್ಚುವರಿ (ಹಿ,ಶ್ರೇ) ಸಿವಿಲ್ ನ್ಯಾಯಾಲಯ ಬಳ್ಳಾರಿ ಇವರ ಪ್ರಕರಣ ಅಸಲು ದಾವಾ ಸಂಖ್ಯೆ:188/2012 ರ ದಿನಾಂಕ:02-02-2015 ರ ತೀರ್ಪಿನಂತೆ ವಿ:2-00 ಎಕ್ರೆಗೆ ಹಕ್ಕು ಹೊಂದಿದ **1.ಕಾಸಿಂಬೀ ತಂದೆ ಲೇಟ್ ಪತ್ರಿ ಕಲೀಲ್‌ಸಾಬ್ 2.ಹುಸೇನ್‌ಬೀ ಗಂಡ ಲೇಟ್ ಪತ್ರಿ ಕಲೀಲ್‌ಸಾಬ್. 3.ಶಬಾನಾ ಬೇಗಂ, 4.ಟಿ.ವಾಹೀದಾ, 5.ಶಾಹೀನಾಬೇಗಂ 6.ಇರ್ಫಾನ್‌ಅಲಿ, 7.ಕಾಸೀಂ ಅಲಿ, 8.ಯಾಕೂಬ್‌ಅಲಿ, 9.ಎಂ.ರಫೀಕ್, 10.ಮೌಲಾಲಿ, 11. ಅಕ್ಬರ್‌ಅಲಿ, 12.ಸಲ್ಮಾ, ಎಲ್ಲರ ತಂದೆ ಲೇಟ್ ಪತ್ರಿ ಕಲೀಲ್‌ಸಾಬ್ ಇವರಿಗೆ ಜಂಟಿಯಾಗಿ ವಿ:1-00 ಎಕ್ರೆ ಹಾಗೂ ಮೌಲಾಬೀ ತಂದೆ ಲೇಟ್ ಸತ್ತಾರ್‌ಸಾಬ್ ಇವರಿಗೆ ವಿ:1-00 ಎಕ್ರೆ** ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

(ಸಹಿ)
ತಹಶೀಲ್ದಾರರು,ಸಿರುಗುಪ್ಪ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ 3.ಕಛೇರಿ ಕಡತಕ್ಕೆ.